ಮಕ್ಕಳದಿನ ವಿಶೇಷ

ಮಕ್ಕಳ ಮನಸ್ಸು ಎಷ್ಟು ಚಂದ! ಎಷ್ಟೊಂದು ಸೂಕ್ಷ್ಮ! 'ಮಕ್ಕಳಿಗೆ ಕಲಿಸುವುದು' ಜಗತ್ತಿನ ಬಹುದೊಡ್ಡ ಉದ್ಯಮಗಳಲ್ಲೊಂದು. ಆದರೆ, ಮಕ್ಕಳಿಂದ ದೊಡ್ಡವರು ಕಲಿಯುವುದೇ ಸಾಕಷ್ಟಿದೆ.

ರಾಜ್ಯೋತ್ಸವದ ಪ್ರಯುಕ್ತ ಪ್ರಸಾರವಾದ 'ಕನ್ನಡದ ಕೋಟ್ಯಧಿಪತಿ' ವಿಶೇಷ ಸಂಚಿಕೆಯಲ್ಲಿ 6.4 ಲಕ್ಷ ರೂಪಾಯಿ ಗೆದ್ದ ಹಾಸನದ ಹುಡುಗನ ಉದಾಹರಣೆ ನೋಡಿ. ಆ ಬಾಲಕನಿಗೆ ತನ್ನ ಶಾಲೆಯ ಬಗ್ಗೆ ಅಪಾರ ಕಾಳಜಿ. ಅಚಾನಕ್ಕಾಗಿ ಒಂದಿಷ್ಟು ದುಡ್ಡು ಸಿಕ್ಕರೆ – ಬಟ್ಟೆ, ಒಡವೆ, ಮನೆ–ಜಮೀನು ಎಂದೆಲ್ಲ ದೊಡ್ಡವರು ಯೋಚಿಸುತ್ತಾರೆ. ಆದರೆ, ಈ ಹುಡುಗನಿಗೆ ದುಡ್ಡು ದೊರೆತಾಗ ತಕ್ಷಣ ನೆನಪಾದುದು ಶಾಲೆ! ದೊಡ್ಡವರೆಲ್ಲ ನಾಚಿಕೊಳ್ಳುವಂತೆ ಆ ಹುಡುಗ ಥಟ್ಟನೆ ಹೇಳಿದ್ದು – 'ಗೆದ್ದ ದುಡ್ಡಿನಲ್ಲಿ ನನ್ನ ಶಾಲೆಗೆ ಕಾಂಪೌಂಡ್ ಕಟ್ಟಿಸಬೇಕು'.

ಹಾಸನದ ಕಟ್ಟಾಯ ಪ್ರೌಢಶಾಲೆಯಲ್ಲಿ ಕೆ.ಎನ್. ತೇಜಸ್ 10ನೇ ತರಗತಿ ವಿದ್ಯಾರ್ಥಿ. ಅವನ ಅಪ್ಪ ನಂಜಪ್ಪ ಕೃಷಿಕ. ಅಮ್ಮ ಗೌರಮಣಿ ಶಾಲೆಯಲ್ಲಿ ಬಿಸಿಯೂಟ ತಯಾರಿಸುವ ಸಿಬ್ಬಂದಿ. ಆ ಕುಟುಂಬಕ್ಕೆ ಕೃಷಿ ಎಂಬುದು ದೊಡ್ಡ ಜಮೀನ್ದಾರಿಕೆಯ ಕೆಲಸವೇನೂ ಅಲ್ಲ. ಆದರೆ ತೇಜಸ್ ಮನಸ್ಸು ತನ್ನ ಮನೆ–ಕೃಷಿಯ ಚೌಕಟ್ಟನ್ನು ಮೀರಿ ಯೋಚನೆ ಮಾಡಿದೆ. ಅವನ ಮನಸ್ಸನ್ನು ಬಹುವಾಗಿ ಕಾಡಿದ್ದು ಶಾಲೆ. ಅವನ ಕಾಳಜಿಯನ್ನು ಗುರುತಿಸಿದ ಶಿಕ್ಷಣ ಸಚಿವರು – 'ದುಡ್ಡು ನಿನ್ನ ಭವಿಷ್ಯಕ್ಕಿರಲಿ, ಶಾಲೆಗೆ ಕಾಂಪೌಂಡ್ ಕಟ್ಟಿಸುವ ಹೊಣೆ ಸರ್ಕಾರಕ್ಕಿರಲಿ' ಎಂದು ಬೆನ್ನುತಟ್ಟಿದರು.

ತೇಜಸ್‌ನನ್ನು ನೆನಪಿಸಿಕೊಳ್ಳಲಿಕ್ಕೆ ಕಾರಣ, ಕಲ್ಮಶವಿಲ್ಲದ ಮಕ್ಕಳ ಸುಂದರ ಮನಸ್ಸಿಗೆ ಉದಾಹರಣೆ ನೀಡಲು. ಸಾಮಾನ್ಯವಾಗಿ ಎಲ್ಲ ಮಕ್ಕಳೂ ಮುಗ್ಧರಾಗಿಯೂ ಮಾನವೀಯತೆಯ ಮಿಂಚುಹುಳಗಳಂತೆಯೂ ಇರುತ್ತಾರೆ. ಆದರೆ, ಬೆಳೆದಂತೆಲ್ಲ ಅವರ ಮನಸ್ಸು ಕದಡತೊಡಗುತ್ತದೆ. ಯಾಕೆ ಹಾಗಾಗುತ್ತದೆ? ಎಳೆಯರ ಮನಸ್ಸು ಮದದಾಗಲು ದೊಡ್ಡವರು ಸೃಷ್ಟಿಸಿಕೊಂಡ ವ್ಯವಸ್ಥೆ ಅಥವಾ ಸಮಾಜ ಕಾರಣವೇ? ಹೀಗೆ ಯೋಚಿಸುತ್ತಾ ಹೋದಂತೆ ಸಮಸ್ಯೆಯ ಬೇರುಗಳು ನಮ್ಮತ್ತಲೇ ಚಾಚತೊಡಗುತ್ತದೆ.

ಮಕ್ಕಳ ಮನಸ್ಸು ಮಲಿನಗೊಳ್ಳುವ ಅಪಾಯದ ಜಿಜ್ಞಾಸೆ ಇತ್ತೀಚೆಗೆ ಹೈಕೋರ್ಟ್‌ನಲ್ಲೂ ಪ್ರತಿಧ್ವನಿಸಿತು. 'ತಂದೆಯನ್ನು ದ್ವೇಷಿಸುವಂತೆ ಹೇಳಿಕೊಡುವ ತಾಯಿ; ತಾಯಿಯನ್ನು ದ್ವೇಷಿಸುವಂತೆ ಹೇಳಿಕೊಡುವ ತಂದೆ. ಇಂಥವರು ಯಾವ ಪುರುಷಾರ್ಥಕ್ಕೆ ಮಕ್ಕಳನ್ನು ಹೆರಬೇಕು? ಪೋಷಕರಾಗಬೇಕು' ಎಂದು ಹೈಕೋರ್ಟ್‌ನ ನ್ಯಾಯಮೂರ್ತಿ ಬಿ. ವೀರಪ್ಪ ಕಳವಳದಿಂದ ಹೇಳಿದರು. ವಿಚ್ಛೇದನಕ್ಕೆ ಸಂಬಂಧಿಸಿದ ಅರ್ಜಿಯೊಂದರ ವಿಚಾರಣೆ ನಡೆಸಿದ ಸಂದರ್ಭದಲ್ಲಿ ಪೋಷಕರಿಬ್ಬರು ನೀಡುವ ಉತ್ತರ, ಅವರ ನಡುವಿನ ಜಟಾಪಟಿಯನ್ನು ಕಂಡು ರೋಸಿಹೋದ ನ್ಯಾಯಮೂರ್ತಿ ಈ ಮಾತುಗಳನ್ನು ಹೇಳಿದ್ದರು.

'ಮಕ್ಕಳನ್ನು ವಸ್ತುಗಳಂತೆ ಬಳಸಬಾರದು. ನಿಮ್ಮ ತೋರ್ಪಡಿಕೆಗಳಿಗೆ ಮಕ್ಕಳನ್ನು ಯಾಕ್ರೀ ಬಳಸಿಕೊಳ್ಳುತ್ತೀರಾ? ನಿಮ್ಮ ಪ್ರತಿಷ್ಠೆಗಳಿಗೆ ಧಕ್ಕೆಯಾಗಬಾರದು, ನಿಮ್ಮೆಲ್ಲಾ ದುರಹಂಕಾರಗಳಿಗೆ ಕೋರ್ಟ್‌ನಲ್ಲಿ ಜಯ ಸಿಗಬೇಕು ಅಲ್ಲವೇ' ಎಂದು ಪ್ರಕರಣವೊಂದರ ಕುರಿತು ಅವರು ಅಸಮಾಧಾನ ವ್ಯಕ್ತಪಡಿಸಿದರು. ಅವರ ಮಾತುಗಳನ್ನು ನಿರ್ದಿಷ್ಟ ಪ್ರಕರಣವೊಂದಕ್ಕೆ ಸಂಬಂಧಿಸಿದವು ಎಂದು ನೋಡಬೇಕಿಲ್ಲ. ಗಂಡಹೆಂಡಿರ ಜಗಳ ಮನೆಮನೆ ಕಥೆಯಷ್ಟೇ.

